**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 19.07.2021.**

**1] ಸಿಂದಗಿ ಪೊಲೀಸ ಠಾಣೆ ಗುನ್ನೆ ನಂ: 196/2021 ಕಲಂ: 279, 337, 338, 304(ಎ) ಐ.ಪಿ.ಸಿ.**

ದಿನಾಂಕ: 17.07.2021 ರಂದು 20.30 ಗಂಟೆ ಸುಮಾರಿಗೆ ಇದರಲ್ಲಿಯ ಮೃತ್ ಆರೋಪಿತನಾದ ಅಬ್ದುಲ್‌ರಜಾಕ ಮೈಬೂಬಸಾಬ ನದಾಫ್ ಸಾ: ಯಂಕಂಚಿ ಮೋಟಾರ ಸೈಕಲ್ ನಂ: ಕೆಎ:28 ಇಎನ್:6606 ನೇದ್ದರ ಚಾಲಕ. ಈತನು ತಾನು ನಡೆಸುತಿದ್ದ ಮೋಟರ ಸೈಕಲ್ ನೇದ್ದನ್ನು ಆಲಮೇಲ ರೋಡ ಹಿಡಿದು ಸಿಂದಗಿ ಕಡೆಗೆ ನಿಸ್ಕಾಳಜಿಯಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಅತೀ ಜೋರಾಗಿ ನಡೆಯಿಸಯತ್ತಾ ಬಂದು ಸಿಂದಗಿ ಕಲ್ ಕಣಿ ಹತ್ತಿರ ಇರುವ ಗಣಿಹಾರ ಪಟೇಲ ರವರ ಕಟ್ಟಿಗೆಯ ಕಟ್ಟಿಗೆ ಅಡ್ಡೆಯ ಹತ್ತಿರ ಸಿಂದಗಿ-ಆಲಮೇಲ ರೊಡ ಮೇಲೆ ನಡೆಯುತ್ತಾ ಹೊರಟ ಕಾಸಿಮ ತಂದೆ ರಾಜೇಸಾಬ ಬಂಕೂರ ವಯಾ 32 ವರ್ಷ ಸಾ: ಆಹೇರಿ ಈತನಿಗೆ ಹಾಯಿಸಿ ಅಪಘಾತ ಪಡಿಸಿ ಅವನಿಗೆ ಭಾರಿ ಘಾಯ ಪೆಟ್ಟು ಪಡಿಸಿ ತಾನೂ ಮೋಟರ ಸೈಕಲ್ ಸಮೇತ ಬಿದ್ದು, ಭಾರಿ ಗಾಯ ಹೊಂದಿದ್ದು, ಕಾಸೀಮ ರಾಜೇಸಾಬ ಬಂಕೂರ ಇವನಿಗೆ ಹಾರೂಗೇರಿಯ ಪಾಟೀಲ ದವಾಖಾನೆಯಲ್ಲಿ ಉಪಚಾರ ಕುರಿತು ದಾಖಲ ಮಾಡಿದ್ದು, ಅಬ್ದುಲ್ ರಜಾಕನಿಗೆ ಉಪಚಾರ ಕುರಿತು ವಿಜಯಪೂರದ ಸಂಜೀವಿನಿ ಆಸ್ಪತ್ರೆಯಲ್ಲಿ ದಾಖಲ ಮಾಡಿದಾಗ ಉಪಚಾರ ಪಲಿಸದೇ ದಿನಾಂಕ 18.07.2021 ರಂದು ಬೆಳಿಗ್ಗೆ 04:05 ಗಂಟೆಗೆ ಮೃತ ಪಟ್ಟಿದ್ದು ಇರುತ್ತದೆ. ಈ ಬಗ್ಗೆ ಅಪಘತ ಪಡಿಸಿದ ಅಬ್ದುಲ್‌ರಜಾಕ ತಂದೆ ಮೈಬೂಬಸಾಬ ನದಾಫ್ ಈತನ ಮೇಲೆ ನನ್ನದು ಪಿರ್ಯದಿ ಇರುತ್ತದೆ. ಅಪಘಾತದ ನಂತರ ನಾನು ನಮ್ಮೂರಿಗೆ ಹೋಗಿ ಮನೆಯಲ್ಲಿ ವಿಚಾರಿಸಿಕೊಂಡು ಬಂದಿದ್ದರಿಂದ ಪಿರ್ಯಾದಿ ಕೊಡಲು ತಡವಾಗಿರುತ್ತದೆಅಂತ ವಗೈರೆ ಪಿರ್ಯದಿಯಲ್ಲಿ ನಮೂದ ಇರುತ್ತದೆ. ಈ ಬಗ್ಗೆ ಮಕ್ಬುಲ್‌ಸಾಬ ಹನೀಫ್‌ಸಾಬ ಗಣಿಹಾರ ಸಾ: ಆಲಮೇಲ್ ಸುಂಬಡ ಗಲ್ಲಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 18.07.2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 208/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ 18.07.2021 ರಂದು 16:15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಸಿದ್ದಪ್ಪ ಚಂದ್ರು ಭಜಂತ್ರಿ 2] ಪೈಗಂಬರ ಮಕಬುಲಸಾಬ ಶಾನವಾಲೆ 3] ಇಫಾನ್ ಮಕಬುಲಸಾಬ ಶಾನವಾಲೆ 4] ಬಾರಾಇಮಾಮ ಮಕಬುಲಸಾಬ ಶಾನವಾಲೆ 5] ಅಲಿಸಾಬ ಮಧರಸಾಬ ಮುಜಾವರ 6] ಅಯುಬ ರಶೀಧ ಮಾಲವಾನಕರ ಸಾ॥ ಎಲ್ಲರೂ ತೊರವಿ ಇವರು ತೊರವಿ ಗ್ರಾಮದ ತೊರವಿ ಗ್ರಾಮದ ಜಾಮೀಯಾ ಮಸೀದಿ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ತಮ್ಮ ಫಾಯ್ದೇಗೋಸ್ಕರ ಇಸ್ಪೇಟ ಎಲೆಗಳ ಮೇಲೆ ಹಣವನ್ನು ಬೆಟ್ಟ ಕಟ್ಟಿ ಅಂದರ-ಬಾಹರ ಅಂಬುವ ಇಸ್ಪೆಟ ಮನ್ನಾ ಜೂಜಾಟ ಆಡುತ್ತಿದ್ದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: 4410/- ರೂಪಾಯಿ, 52 ಇಸ್ಪೇಟ ಎಲೆಗಳು ಕಿ॥ 00=00 ಈ ಬಗ್ಗೆ ಜಿ ಎಸ್ ಉಪ್ಪಾರ ಪಿಎಸ್ಐ ರೂರಲ್ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 18.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಚಡಚಣ ಪೊಲೀಸ ಠಾಣೆ ಗುನ್ನಾ. ನಂ: 68/2021 ಕಲಂ: 143, 147, 148, 323, 307, 341, 504, 506, 109 ರೆ:ವ್ಯ: 149 ಐಪಿಸಿ**

ದಿನಾಂಕ 18.07.2021 ರಂದು 13.30 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ದೊಂಡಿರಾಮ ಬಳವಂತ ಯಡ್ರಾವಕರ 2] ಅನೀಲ ದೊಂಡಿರಾಮ ಯಡ್ರಾವಕರ 3] ಶಿವಾಜಿ ಬಳವಂತ ಯಡ್ರಾವಕರ 4] ಆಕಾಶ ಶಿವಾಜಿ ಯಡ್ರಾವಕರ 5] ಕಲ್ಲಪ್ಪ ತುಕಾರಾಮ ತೇಲಿ 6] ಸುದರ್ಶನ ಉತ್ತಮ ಪಾಟೀಲ 7] ಹಣಮಂತ ರಾಜಾರಾಮ ಪಾಟೀಲ 8] ಬಾಹುರಾಯ ಉತ್ತಮ ಪಾಟೀಲ 9] ಗಜಾನಂದ ಬಳವಂತ ಯಡ್ರಾವಕರ ಸಾ॥ ಸಾತಲಗಾಂವ [ಪಿಬಿ] ಹಾಲಿ ವಸತಿ॥ ಜಿಗಜೇವಣಗಿ [ಸುರಮುತ್ಯಾನ್ ತಾಂಡಾ] ತಾ॥ ಚಡಚಣ. ಪಿರ್ಯಾದಿ ಮತ್ತು ಆರೋಪಿತರ ಮದ್ಯ ಪಿತ್ರಾರ್ಜಿತವಾದ ಜಮೀನಗಳಲ್ಲಿ ಹಾಯ್ದು ಹೋಗುವ ವಿಷಯವಾಗಿ ಜಗಳ ತಂಟೆ ತಕರಾರುಗಳು ಇದ್ದು, ಅದೆ ಹಿನ್ನೆಲೆಯ ಸಿಟ್ಟಿನಿಂದಾ ಆರೋಪಿ ಅ ನಂ: 1 ರಿಂದಾ 8 ನೇದವರು ಗೈರ ಕಾಯಿದೆಶೀರಿ ಮಂಡಳಿಯಾಗಿ ಕೂಡಿಕೊಂಡು ಗಜಾನಂದ ಬಳವಂತ ಯಡ್ರಾವಕರ ಇವನ ಬಾಹ್ಯ ಪ್ರಚೋದನೆಯಿಂದಾಗಿ/ ದುಷ್ಪ್ರೇರಣೆಯಿಂದಾಗಿ/ ಸಪೋರ್ಟದಿಂದಾ ತನ್ನ ಗಂಡ ಬಾಪುರಾಯ ಇವರಿಗೆಗೆ ಕೊಲೆ ಮಾಡುವ ಉದ್ದೇಶದಿಂದಾ ಟ್ರಾಕ್ಟರ್ ತರಬಿ ಬಡಿಗೆ, ಕೊಡಲಿ, ಕಲ್ಲಿನಿಂದಾ, ಕೈಯಿಂದಾ ಹೊಡಿ-ಬಡಿ ಮಾಡಿ, ಕಾಲಿನಿಂದಾ ಒದ್ದು ಕೊಲೆ ಮಾಡಲು ಪ್ರಯತ್ನ ಮಾಡಿರುತ್ತಾರೆ ಅಂತಾ ಫಿರ್ಯಾದದಲ್ಲಿ ನಮೂದು ಇರುತ್ತದೆ. ಈ ಬಗ್ಗೆ ಶ್ರೀಮತಿ: ರೂಪಾಲಿ ಬಾಪು ಯಡ್ರಾವಕರ ಸಾ॥ ಸಾತಲಗಾಂವ [ಪಿಬಿ] ಹಾಲಿ ವಸತಿ॥ ಜಿಗಜೇವಣಗಿ ಸುರಮುತ್ಯಾನ್ ತಾಂಡಾ] ತಾ॥ ಚಡಚಣ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 18.07,2021 ರಂದು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ತಾಳಿಕೊಟಿ ಪೊಲೀಸ ಠಾಣೆ ಗುನ್ನಾ. ನಂ: 129/2021 ಕಲಂ: ಮನುಷ್ಯ ಕಾಣೆ**

ದಿನಾಂಕ: 02.07.2021 ರಂದು 18.00 ಗಂಟೆ ಸುಮಾರಿಗೆ ಇದರಲ್ಲಿ ಕಾಣೆಯಾದ ಗುರು ತಂ ಇಂದುಧರ ಹಿರೇಮಠ ವಯಾ-43 ವರ್ಷ ಜಾತಿ: ಹಿಂದೂ ಲಿಂಗಾಯತ ಉದ್ಯೋಗ- ಒಕ್ಕಲುತನ ಸಾ॥ ಗಡಿ ಸೋಮನಾಳ ತಾ॥ ತಾಳಿಕೋಟಿ ಈತನು ತಾಳಿಕೋಟಿಗೆ ಹೋಗುತ್ತೇನೆ ಅಂತಾ ಆಸ್ಪತ್ರೆಯಿಂದ ಹೇಳಿ ಹೋದವನು ಪರ್ತ ಮನೆಗೆ ಬಾರದೆ ಆಸ್ಪತ್ರೆಗೆ ಹೋಗದೆ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾನೆ. ಈ ಬಗ್ಗೆ ಚಂದ್ರಶೇಖರ ಇಂದುಧರ ಹಿರೇಮಠ ಸಾ॥ ಗಡಿ ಸೋಮನಾಳ ತಾ॥ ತಾಳಿಕೋಟಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 18.07,2021 ರಂದು ತಾಳಿಕೊಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.